ಇಂದು ದಿಃ**14-07-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ.ಎ.ಸಿ ವಕೀಲರಿಂದ 2 ನೇ ಪ್ರತಿವಾದಿಗಳ ಪರಃ**

ಟ್ರಾಕ್ಟರ್ ನ ಬಿ ಎಕ್ಸ್‌ಟ್ರಾಕ್ಟ್ ಎರಡನೇ ಪ್ರತಿವಾದಿಯ ಹೆಸರಿನಲ್ಲಿ ಮಾತ್ರ ಇದೆ ಎಂದರೆ ಸರಿ. 2 ನೇ ಪ್ರತಿವಾದಿ ಬ್ಯಾಂಕ್ ನಲ್ಲಿ ಸಾಲ ಮಾಡಿ ವಯುಕ್ತಿಕವಾಗಿ ಈ ಟ್ರಾಕ್ಟರ್ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1991 ರಿಂದ ನಾನು ಮದುವೆಯ ನಂತರ ನನ್ನ ಗಂಡನ ಮನೆಯಲ್ಲಿ ವಾಸ ಇದ್ದೇನೆ ಎಂದರೆ ಸರಿ. 2013 ರಲ್ಲಿ ಟ್ರಾಕ್ಟರ್ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ತವರು ಮನೆಗೆ ಹೋಗಿ ಬಂದು ಮಾಡುತ್ತಿದ್ದೆನು ಎಂದು ಹೇಳುತ್ತಾರೆ. 1991 ರಲ್ಲಿಯೂ ನಾನು ಆಸ್ತಿಯಲ್ಲಿ ಹಿಸ್ಸೆ ಬೇಕು ಎಂದು ಕೇಳಿದ್ದೆನು. ನಂತರದಲ್ಲಿ ಈಗ ಕೇಳಿದ್ದೇನೆ. ಸಾಕ್ಷಿ ನಾವೆಲ್ಲರೂ ಒಟ್ಟಿಗೆ ಇದ್ದೇವು, ನಾನು ಸಹ ಹೋಗಿ ಬಂದು ಮಾಡುತ್ತಿದ್ದೆನು ಎಂದು ಹೇಳುತ್ತಾರೆ. 1995 ರ ವರೆಗೆ 2 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿರಲಿಲ್ಲ ಎಂದು ನಾನು ವಾದಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ. ದಾವಾ ಆಸ್ತಿಯಲ್ಲಿ ಭತ್ತ ಮಾತ್ರ ಬೆಳೆಯುತ್ತಾರೆ ಎಂದರೆ ಸರಿ. ಸದರಿ ಭತ್ತದಿಂದ ಪ್ರತಿ ಎಕರೆಗೆ ಹೆಚ್ಚೆಂದರೆ ರೂ.3 ಸಾವಿರ ಲಾಭ ಒಂದು ಬೆಳೆಗೆ ಮಾತ್ರ ಆಗುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಹಳ್ಳಿಯಲ್ಲಿ ವಾಸ ಮಾಡುವ ಒಬ್ಬ ವ್ಯಕ್ತಿಗೆ ಕನಿಷ್ಠ ಎಂದರೆ ಪ್ರತಿ ತಿಂಗಳಿಗೆ ರೂ.1,500/- ಸಾವಿರ ಹಣ ಬೇಕಾಗುತ್ತದೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯರಿಗೆ ಸುಮಾರು ರೂ.19 ಲಕ್ಷ ಸಾಲ ಇದೆ ಎಂದರೆ ಸರಿಯಲ್ಲ. 2016 ರಲ್ಲಿ ಜುಬಾನಿ ಹಿಸ್ಸೆ ಆಗಿದೆ ಎಂದು ನಾನು ವಾದಪತ್ರದಲ್ಲಿ ಹೇಳಿದ್ದು, ಅದರ ಬರವಣಿಗೆ ನೋಡಿದ್ದಿರಾ ಎಂದರೆ ಸಾಕ್ಷಿ ಹಿಸ್ಸೆ ಆಗಿಲ್ಲ ಎಂದು ಹೇಳುತ್ತಾರೆ. ನನ್ನ ಮತ್ತು ಉಳಿದ ವಾದಿಯರ ಮದುವೆಯನ್ನು

2 ನೇ ಪ್ರತಿವಾದಿ ಸಾಲ ಮಾಡಿ, ಮಾಡಿದ ಕಾರಣ, ನಮಗೆ ಬರುವ 12 ಗುಂಟೆ ಸದರಿ ಸಾಲದ ಬಾಬ್ತು ಆಗುತ್ತದೆ ಎಂದರೆ ಸರಿಯಲ್ಲ. 1978 ರಲ್ಲಿ ನನ್ನ ತಂದೆ ತೀರಿಕೊಂಡ ನಂತರ, 2 ನೇ ಪ್ರತಿವಾದಿ ನಮ್ಮ ನೈಸರ್ಗಿಕ ಪಾಲನ ಕರ್ತನಾಗಿ, ನಮ್ಮ ಮದುವೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನಮಗೆ ಬರಬೇಕಾದ ಹಿಸ್ಸೆಯ ಅನುಗುಣವಾಗಿ ಆತ ಖರ್ಚು ಮಾಡಿದ್ದಾನೆ ಎಂದರೆ ಸರಿಯಲ್ಲ. ನನಗಾಗಲೀ, ನನ್ನ ಸಹೋದರಿಯರಿಗಾಗಲೀ ದಾವಾ ಆಸ್ತಿಗಳಲ್ಲಿ ಯಾವುದೇ ಹಿಸ್ಸೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಂಗೀಯರಿಗೆ ಸಹಾಯ ಮಾಡಲು ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. 1991 ರಿಂದ ನಾನು ದಾವಾ ಆಸ್ತಿಗಳ ಜಂಟಿ ಸ್ವಾಧೀನದಲ್ಲಿ ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.